ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2014-15 : ಜೂನ್ 5, 2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ದೃಶ್ಯ ಮಾಧ್ಯಮಗಳಲ್ಲಿ ಕನಕದಾಸರು : ಅಭಿವ್ಯಕ್ತಿ ಆಯಾಮಗಳ ಕುರಿತ ಒಂದು ದಿನ ಕಾರ್ಯಾಗಾರ<br>ಅಧ್ಯಕ್ಷತೆ:<br>ಡಾ ಕೆ. ಮರುಳ ಸಿದ್ದಪ್ಪ<br>ಮುಖ್ಯ ಅತಿಥಿಗಳು:<br>ರಾಜೇಂದ್ರ ಸಿಂಗ್‌ಬಾಬು,<br>ಅಧ್ಯಕ್ಷರು,<br>ಕರ್ನಾಟಕ ಚಲನಚಿತ್ರ ಅಕಾಡೆಮಿ<br>ಕೆ.ಎ. ದಯಾನಂದ,<br>ನಿರ್ದೇಶಕರು,<br>ಕನ್ನಡ ಮತ್ತು ಸಂಸ್ಕೃತಿ ಇಲಾಖೆ. | 06-06-2015<br>ಶನಿವಾರ<br>ಬೆಳಿಗ್ಗೆ<br>9-00 ಗಂಟೆಗೆ | ಪ್ರಿಯದರ್ಶಿನಿ ಸಭಾಂಗಣ,<br>ಬಾದಾಮಿ ಹೌಸ್,<br>ಜೆ.ಸಿ. ರಸ್ತೆ,<br>ಬೆಂಗಳೂರು. |
| 2. | ಮಾಜಿ ಮುಖ್ಯಮಂತ್ರಿ ದಿ. ಡಿ. ದೇವರಾಜ ಅರಸುರವರ 33ನೇ ಪುಣ್ಯಸ್ಮರಣೆ:<br>ಪ್ರತಿಮೆಗೆ ಮಾಲಾರ್ಪಣೆ:<br>ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು<br>ಹೆಚ್. ಆಂಜನೇಯ,<br>ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು. | 06-06-2015<br>ಶನಿವಾರ<br>ಬೆಳಿಗ್ಗೆ<br>10-00 ಗಂಟೆಗೆ | ವಿಧಾನಸೌಧದ ಪಶ್ಚಿಮ ದ್ವಾರದ ಮುಂಭಾಗ, ಬೆಂಗಳೂರು. |

ನಿರ್ದೇಶಕರ ಪರವಾಗಿ

# <u>ಪತ್ರಿಕಾ ಪ್ರಕಟಣೆ</u>

## <u>ಪರಿಸರ ಸಂರಕ್ಷಣೆ ಕಾಯಕದಲ್ಲಿ ತೊಡಗಿಸಿಕೊಳ್ಳಲು ಮುಖ್ಯಮಂತ್ರಿ ಕರೆ</u>

ಬೆಂಗಳೂರು, ಜೂನ್ 5 (ಕರ್ನಾಟಕ ವಾರ್ತೆ)

ಪ್ರಾಕೃತಿಕ ಸಮತೋಲನ ಕಾಯ್ದುಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದ್ದು, ಮುಂದಿನ ಪೀಳಿಗೆಗೆ ಉತ್ತಮ ಪರಿಸರ ಸಂರಕ್ಷಿಸುವ ಸಲುವಾಗಿ ಸಮಾಜದ ಎಲ್ಲಾ ಸಮುದಾಯಗಳು ಇಂದು ಪರಿಸರ ಸಂರಕ್ಷಣೆ ಕಾಯಕದಲ್ಲಿ ಸಕ್ರೀಯವಾಗಿ ತೊಡಗಿಸಿಕೊಳ್ಳುವ ಅಗತ್ಯತೆ ಇದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕರೆ ನೀಡಿದರು.

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನಗರದ ಕಂಠೀರವ ಒಳಾಂಗಣದ ಕ್ರೀಡಾಂಗಣದಲ್ಲಿ ಇಂದು ಹಮ್ಮಿಕೊಳ್ಳಲಾಗಿದ್ದ "ವಿಶ್ವ ಪರಿಸರ ದಿನಾಚರಣೆ" ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತ, ಪರಿಸರ ಮಾಲಿನ್ಯಕ್ಕೆ ಪೂರಕವಾಗುವಂತಹ ಸಣ್ಣ ತಪ್ಪುಗಳನ್ನು ನಾವು ಆಗ್ಗಾಗ್ಗೆ ಎಸಗುತ್ತಿರುತ್ತೇವೆ. ಮುಂಬರುವ ದಿನಗಳಲ್ಲಿ ಇಂತಹ ತಪ್ಪುಗಳನ್ನು ಎಸಗುವುದಿಲ್ಲ ಎಂದು ನಾವುಗಳು ಪ್ರಜ್ಞಾಪೂರಕವಾಗಿ ಸಂಕಲ್ಪ ಕೈಗೊಂಡಲ್ಲಿ ಪರಿಸರ ಕಾಪಾಡಬಹುದು ಎಂದರು.

ಜಗತ್ತಿನಾದ್ಯಂತ ಇಂದು 700 ಕೋಟಿಗೂ ಹೆಚ್ಚು ಜನಸಂಖ್ಯೆಯನ್ನು ನಾವು ಇಂದು ಕಾಣಬಹುದಾಗಿದೆ. ಈ ಹಿನ್ನೆಲೆಯಲ್ಲಿ ಪರಿಸರ ಇಲಾಖೆಯು ಈ ವರ್ಷದ ಘೋಷಣೆಯನ್ನಾಗಿ "700 ಕೋಟಿ ಕನಸುಗಳು, ಒಂದೇ ಪೃಥ್ವಿ . ಮಿತವಾಗಿ ಬಳಸಿ ಉಳಿಸಿ" ಘೋಷಿಸಿರುತ್ತದೆ ಎಂದ ಅವರು, ಇಂದೇ ನಾವೆಲ್ಲರೂ ಎಚ್ಚೆತ್ತುಕೊಂಡು ಭೂಮಿಯನ್ನು ಉಳಿಸುವ ಸಂಕಲ್ಪ ಮಾಡೋಣ ಎಂದು ಕರೆ ನೀಡಿದರು.

ಬೆಂಗಳೂರು ನಗರ ಇಂದು 800 ಚದರ ಕಿ.ಮೀ ವ್ಯಾಪ್ತಿಗೂ ಮೀರಿ ಬೆಳೆದಿದ್ದು, ಪ್ರತಿದಿನ 3 ರಿಂದ ನಾಲ್ಕೂವರೆ ಮೆ.ಟನ್ ತ್ಯಾಜ್ಯ ಉತ್ಪಾದನೆಯಾಗುತ್ತಿದೆ. ಕಸದ ಉತ್ಪಾದನೆಯಿಂದ ಬೆಂಗಳೂರು ನಗರ ಇಂದು ಗಾರ್ಬೇಜ್ ಸಿಟಿ ಎಂಬ ಕುಖ್ಯಾತಿ ಪಡೆದಿದ್ದು, ಈ ಪರಿಸ್ಥಿತಿಗೆ ನಾವೆಲ್ಲರೂ ಕಾರಣ ಎಂದ ಮುಖ್ಯಮಂತ್ರಿಗಳು, ರಾಜ್ಯ ಸರ್ಕಾರ ಈ ನಿಟ್ಟಿನಲ್ಲಿ ಕಾರ್ಯೋನ್ಮುಖಗೊಂಡು ಸಮರ್ಪಕ ಕಸ ವಿಲೇವಾರಿಗೆ 6 ಸಂಸ್ಕರಣ ಘಟಕಗಳನ್ನು ನಗರದಲ್ಲಿ ಸ್ಥಾಪಿಸಿದ್ದು ಈ ತಿಂಗಳಲ್ಲಿ 4 ಸಂಸ್ಕರಣ ಘಟಕಗಳು ಉದ್ಘಾಟನೆಗೊಳ್ಳಲಿದ್ದು, ಕಸ ವಿಲೇವಾರಿ ಸಮರ್ಪಕವಾಗಿ ನಡೆಯಲಿದೆ ಎಂದು ಭರವಸೆ ನೀಡಿದರು.

ಹಳ್ಳಿಗಾಡು ಪ್ರದೇಶಗಳಲ್ಲಿ ಈ ಹಿಂದೆ ಕಾಣ ಸಿಗುತ್ತಿದ್ದ ಗುಂಡುತೋಪು, ಕೆರೆಗಳು ಇಂದು ನಾಶಗೊಳ್ಳುತ್ತಿರುವುದನ್ನು ನಾವು ಕಾಣಬಹುದಾಗಿದ್ದು, ಇವುಗಳ ಸಂರಕ್ಷಣೆಗೆ ಅರಣ್ಯ ಇಲಾಖೆ ಅನೇಕ ಯೋಜನೆಗಳನ್ನು ಹಮ್ಮಿಕೊಳ್ಳುತ್ತಿದೆ. ಆದರೆ ಜನಸಾಮಾನ್ಯರ ಸಹಭಾಗಿತ್ವವಿಲ್ಲದೇ ಯಾವುದೇ ಯೋಜನೆಗಳು ಯಶಸ್ವಿಗೊಳ್ಳುವುದು ಕಷ್ಟಸಾಧ್ಯ ಎಂದರು.

ಕೆರೆಗಳ ಸಂರಕ್ಷಣೆ ಮತ್ತು ಒತ್ತುವರಿ ತೆರವುಗೊಳಿಸಲು "ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ " ಕಾಯ್ದೆಯನ್ನು ಇಂದಿನಿಂದ ಜಾರಿಗೊಳಿಸಲಾಗಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಮಳೆ ನೀರು ಕೊಯ್ಲು , ಸೌರ ವಿದ್ಯುತ್ ಉತ್ಪಾದನೆ ಮುಂತಾದ ಪರಿಸರಕ್ಕೆ ಪೂರಕವಾದಂತಹ ಕಾರ್ಯಕ್ರಮಗಳಿಗೆ ಸರ್ಕಾರ ಹೆಚ್ಚು ಒತ್ತು ನೀಡುತ್ತಿದ್ದು, ಜನ ಸಾಮಾನ್ಯರೂ ಸಹ ಈ ಕಾರ್ಯಕ್ರಮಗಳ ಬಗ್ಗೆ ಆಸಕ್ತಿ ಮೂಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕೈಗಾರಿಕೆಗಳು ಬೆಳೆಯಬೇಕು. ಕೈಗಾರೀಕರಣದಿಂದ ಉದ್ಯೋಗ ಹಾಗೂ ಸಾಮಾಜಿಕ ಅಭಿವೃದ್ಧಿ ಸಾಧ್ಯ. ಇದರ ಜೊತೆಗೆ ಪರಿಸರ ಸಂರಕ್ಷಣೆ ಜವಾಬ್ದಾರಿಯೂ ನಮ್ಮ ಮೇಲಿದೆ. ಆಭಿವೃದ್ಧಿ ಹಾಗೂ ಪರಿಸರ ರಕ್ಷಣೆ ಬಗ್ಗೆ ಸಮನ್ವಯತೆ ಕಾಯ್ದುಕೊಳ್ಳಬೇಕು ಎಂದರು.

ಅರಣ್ಯ. ಪರಿಸರ ಮತ್ತು ಜೀವಿಶಾಸ್ತ್ರ ಸಚಿವ ರಮಾನಾಥ ರೈ ಅವರು ಮಾತನಾಡಿ ಪ್ರಾಕೃತಿಕ ಅಸಮತೋಲನದಿಂದ ಇಂದು ಜಾಗತಿಕ ತಾಪಮಾನ ಹೆಚ್ಚಳವಾಗುತ್ತಿದ್ದು, ಇದರಿಂದ ಪ್ರಕೃತಿ ವಿಕೋಪ ಸಂಭವಿಸಿ ಜನಸಾಮಾನ್ಯರು ಬಹಳಷ್ಟು ತೊಂದರೆ ಅನುಭವಿಸುತ್ತಿರುವುದನ್ನು ನಾವು ಕಾಣಬಹುದಾಗಿದೆ. ಪರಿಸರ ಉಳಿಸುವುದು ಬಹಳ ಮುಖ್ಯ. ಮುಂದಿನ ಪೀಳಿಗೆಗೆ ಪರಿಸರ ಉಳಿಸುವುದು ಅತ್ಯಗತ್ಯ ಎಂದರು.

ನಮಗೆ ಇರುವುದು ಒಂದೇ ಭೂಮಿ. ಭೂಮಿ ತಾಯಿಯ ಒಡಲಿನಿಂದ ಸಂಪನ್ಮೂಲಗಳನ್ನು ಬಗೆಯುವ ಮುನ್ನ ಸಾಕಷ್ಟು ಆಲೋಚನೆ ಮಾಡಬೇಕು ಎಂದರು.

ಕೇಂದ್ರ ಕಾನೂನು ಸಚಿವ ಸದಾನಂದ ಗೌಡ ಅವರು ಮಾತನಾಡಿ ಪರಿಸರ ಮನುಷ್ಯನ ಅವಿಭಾಜ್ಯ ಅಂಗ. ಪರಿಸರವಿಲ್ಲದೇ ಮನುಷ್ಯನ ಬದುಕು ಇಲ್ಲ. ಪರಿಸರ ಸಂರಕ್ಷಣೆಗೆ ನಾವು ಹೆಚ್ಚು ಕಾಳಜಿವಹಿಸಬೇಕು ಎಂದ ಅವರು , ಮಹಾತ್ಮ ಗಾಂಧೀಜಿಯವರು ಹಾಕಿಕೊಟ್ಟಂತಹ ಸ್ವಚ್ಚತಾ ಆಂದೋಲನ ಕಾರ್ಯಕ್ರಮ ಇಂದಿನ ದಿನಗಳಲ್ಲಿ ಹೆಚ್ಚು ಮಹತ್ವ ಪಡೆದುಕೊಳ್ಳುತ್ತಿದೆ ಎಂದರು.

ಸಮಾರಂಭ ಆರಂಭದಲ್ಲಿ 2015ನೇ ಸಾಲಿನ ಕರ್ನಾಟಕ ರಾಜ್ಯ ಪ್ರಶಸ್ತಿ ವಿಜೇತರಾದ ಸಿ. ಲಕ್ಷ್ಮಣ್, ಡಾ. ಆರ್. ಪರಿಮಳಾ, ಡಾ. ಎಸ್. ಹರೀಶ್ ಜೋಷಿ ಅವರುಗಳನ್ನು ವೈಯಕ್ತಿಕ ವಿಭಾಗದಲ್ಲಿ ಮತ್ತು ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ರೌಂಡ್ ಟೇಬಲ್, ಬೆಂಗಳೂರು, ಬಂಟನೂರ ಗ್ರಾಮ ಅರಣ್ಯ ಸಮಿತಿ, ಮುಧೋಳ ವಲಯ, ಬಾಗಲಕೋಟೆ ವಿಭಾಗ ಮತ್ತು ಇಕೋ ಡೆವಲೆಪ್‌ಮೆಂಟ್ ಕಮಿಟಿ, ಅವುರಾಲಿ, ಫಾಂಸೋಲಿ ವನ್ಯ ಜೀವಿ ವಲಯ, ದಾಂಡೇಲಿ ಸಂಸ್ಥೆಗಳಿಗೆ ಮುಖ್ಯಮಂತ್ರಿಗಳು ಈ ಸಂದರ್ಭದಲ್ಲಿ ಪ್ರಶಸ್ತಿ ಪ್ರದಾನ ಮಾಡಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಹಜ್ ಸಚಿವರಾದ ಆರ್. ರೋಷನ್ ಬೇಗ್ ಅವರು ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಡಾ. ವಾಮನ್ ಆಚಾರ್ಯ, ಅರಣ್ಯ ಇಲಾಖೆಯ ಅಪರ ಮುಖ್ಯಕಾರ್ಯದರ್ಶಿ ಎಂ. ಮದನ್‌ಗೋಪಾಲ್ ಸೇರದಂತೆ ಹಿರಿಯ ಅಧಿಕಾರಿಗಳು ಹಾಗೂ ಗಣ್ಯರು ಉಪಸ್ಥಿತರಿದ್ದರು.

ಮಮತ:ಜಿಪಿಆರ್.

# ಶಾಲಾ ಕ್ರೀಡಾಕೂಟಗಳಿಗೆ ನಗದು ಬಹುಮಾನ

ಬೆಂಗಳೂರು, ಜೂನ್ 5 (ಕರ್ನಾಟಕ ವಾರ್ತೆ)

2014-15 ನೇ ಸಾಲಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ನಡೆಸಲಾದ ರಾಜ್ಯಮಟ್ಟದ ಶಾಲಾ ಕ್ರೀಡಾಕೂಟಗಳಲ್ಲಿ ಹಾಗೂ ಎಸ್.ಜಿ.ಎಫ್.ಐ. ಸಂಸ್ಥೆ ಸಂಘಟಿಸಿದ್ದ 60 ನೇ ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ವಿಜೇತರಾದ ಶಾಲಾ ಕ್ರೀಡಾಪಟುಗಳಿಗೆ ನಗದು ಬಹುಮಾನ ನೀಡಲು ಅರ್ಜಿಗಳನ್ನು ಆಹ್ವಾನಿಸಿದೆ.

ಪ್ರಥಮ/ದ್ವಿತೀಯ/ತೃತೀಯ ಸ್ಥಾನ ಗಳಿಸಿರುವ ಕ್ರೀಡಾಪಟುಗಳು ನಿಗಧಿತ ಅರ್ಜಿ ನಮೂನೆಯನ್ನು ಆಯಾ ಜಿಲ್ಲೆಗಳ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಉಪ ನಿರ್ದೇಶಕರ ಕಚೇರಿ ಇವರಿಂದ ಪಡೆದು ಜೂನ್ 25 ರೊಳಗೆ ಸಲ್ಲಿಸಲು ಕೋರಿದೆ.

ಬಾಬು:ಜಿಪಿಆರ್.

## ಪಠ್ಯ ಪುಸ್ತಕ ಲಭ್ಯ

ಬೆಂಗಳೂರು, ಜೂನ್ 5 (ಕರ್ನಾಟಕ ವಾರ್ತೆ)

ಸಾರ್ವಜನಿಕ ಶಿಕ್ಷಣ ಇಲಾಖೆಯ ಕರ್ನಾಟಕ ಪಠ್ಯ ಪುಸ್ತಕ ಸಂಘ (ರಿ) ವು ಇಲಾಖಾ ನಿರ್ದೇಶನದಲ್ಲಿ ಸಂಗೀತ, ನೃತ್ಯ ಹಾಗು ತಾಳವಾದ್ಯ ಪಠ್ಯ ಹಾಗೂ ಸಂಗೀತ ಮತ್ತು ನೃತ್ಯದ ಪಠ್ಯ ಪುಸ್ತಕಗಳನ್ನು ವೆಬ್‌ಸೈಟ್‌ನಲ್ಲಿ ಅಳವಡಿಸಿದೆ.

ಸಂಗೀತ ನೃತ್ಯ ಹಾಗೂ ತಾಳವಾದ್ಯ ಪಠ್ಯವಸ್ತು , ಭರತ ನಾಟ್ಯ ಸೀನಿಯರ್, ಭರತ ನಾಟ್ಯ ಜೂನಿಯರ್, ಕರ್ನಾಟಕ ಸಂಗೀತ ಪ್ರಾಥಮಿಕ ಹಂತ, ಕರ್ನಾಟಕ ಸಂಗೀತ ಮಾಧ್ಯಮಿಕ ಹಂತದ ಪುಸ್ತಕಗಳನ್ನು www.ktbs.kar.nic.in ವೆಬ್‌ಸೈಟ್‌ನಲ್ಲಿ ಅಳವಡಿಸಿದೆ.

ಸಹಾಯ ನಿರ್ದೇಶಕರ ಕಚೇರಿ, ಸರ್ಕಾರಿ ವಿಭಾಗೀಯ ಪಠ್ಯಪುಸ್ತಕ ಮಳಿಗೆ, ಹೊಸೂರು ರಸ್ತೆ, ಬೊಮ್ಮನಹಳ್ಳಿ, ಬೆಂಗಳೂರು – 560 068 ಇಲ್ಲಿ ಸಂಗೀತ ನೃತ್ಯ ಹಾಗೂ ತಾಳ ವಾದ್ಯಗಳ ಇತರೆ ಪುಸ್ತಕಗಳು ದೊರೆಯುತ್ತದೆ ಎಂದು ಸಂಘದ ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದ್ದಾರೆ.

ಬಾಬು:ಜಿಪಿಆರ್.

## ಮಾಹಿತಿ ನೀಡದ ಅಧಿಕಾರಿಗಳಿಗೆ ದಂಡ

ಬೆಂಗಳೂರು, ಜೂನ್ 5 (ಕರ್ನಾಟಕ ವಾರ್ತೆ)

ಕರ್ನಾಟಕ ಮಾಹಿತಿ ಆಯೋಗವು ಮಾಹಿತಿ ಹಕ್ಕು ಕಾಯ್ದೆಯಡಿ 9 ತಿಂಗಳ ತಡವಾಗಿ ಮಾಹಿತಿ ನೀಡಿದ ಕೆ.ಐ.ಎ.ಡಿ.ಬಿ. ಯ ನಾಲ್ವರು ಅಧಿಕಾರಿಗಳಿಗೆ ತಲಾ 10,000 ರೂ. ಗಳ ದಂಡ ವಿಧಿಸಿ ಆದೇಶ ಹೊರಡಿಸಿದೆ.

ರಾಜ್ಯ ಮಾಹಿತಿ ಆಯುಕ್ತ ಶ್ರೀ ಶಂಕರ್. ಆರ್. ಪಾಟೀಲ್ ಅವರು ಮೇ 26 ರಂದು ಈ ಬಗ್ಗೆ ಆದೇಶ ನೀಡಿ ಕೆ.ಐ.ಎ.ಡಿ.ಬಿ ಯ ಮಾಹಿತಿ ಅಧಿಕಾರಿಗಳು ಹಾಗೂ ಅಭಿವೃದ್ಧಿ ಅಧಿಕಾರಿಗಳಾದ ಮೈಸೂರು ವಲಯದ ಡಿ. ಬಿಳಿಗಿರಿರಂಗಸ್ವಾಮಿ, ಬಳ್ಳಾರಿಯ ಜಯಶಂಕರ್, ಹಾಸನದ ಕೆ.ಸಿ. ಶಿವಕುಮಾರ್ ಹಾಗೂ ಬೆಂಗಳೂರು ಗ್ರಾಮಾಂತರ ದೇವನಹಳ್ಳಿಯ ಎಂ. ರಾಮು ಅವರುಗಳಿಗೆ ತಲಾ ರೂ 10,000 ದಂಡ ವಿಧಿಸಿದ್ದಾರೆ.

:ಬಾಬು:ಜಿಪಿಆರ್.

## ಫೆಲೋಶಿಪ್‌ಗೆ ಅರ್ಜಿ ಆಹ್ವಾನ : ಅವಧಿ ವಿಸ್ತರಣೆ

ಬೆಂಗಳೂರು, ಜೂನ್ 5 (ಕರ್ನಾಟಕ ವಾರ್ತೆ)

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವು 2015–16ನೇ ಸಾಲಿಗಾಗಿ ಈ ಕೆಳಕಂಡ ವಿಷಯಗಳ ಮೇಲೆ ಅಧ್ಯಯನ ನಡೆಸಲು ತಲಾ ರೂ. 1.00 ಲಕ್ಷಗಳಂತೆ ಫೆಲೋಶಿಪ್ ನೀಡುತ್ತಿದೆ. 12 ತಿಂಗಳ ಅವಧಿಯ ಈ ಅಧ್ಯಯನ ಯೋಜನೆಯ ಬಗ್ಗೆ ಆಸಕ್ತರಿಂದ ಸಂಶೋಧನಾರ್ಥಿಗಳು ತಮ್ಮ

ವಿದ್ಯಾರ್ಹತೆ, ಸಂಶೋಧನೆಯ ಬಗೆಗಿನ ಅನುಭವ ಹಾಗೂ ತಮ್ಮ ಆಸಕ್ತಿ ಕ್ಷೇತ್ರವನ್ನು ಒಳಗೊಂಡ ವಿವರಗಳನ್ನು ಸಲ್ಲಿಸಬಹುದು.

"ಕನಕದಾಸರ ಕುರಿತು ನಾಟಕಗಳು : ಸಾಂಸ್ಕೃತಿಕ ಚಲನಶೀಲತೆ", ಕನಕದಾಸ ಮತ್ತು ಪಶುಪಾಲನಾ ಪರಂಪರೆ". "ವ್ಯಕ್ತಿತ್ವ ನಿರ್ಮಾಣದ ನೆಲೆಗಳು : ಕನಕ ಮತ್ತು ಕುವೆಂಪು" ಆಗಿರುತ್ತದೆ. ಆಯ್ಕೆ ಮಾಡಿಕೊಂಡ ವಿಷಯವನ್ನು ಕುರಿತು ಸಂಕ್ಷಿಪ್ತ ಮಾಹಿತಿಯನ್ನೊಳಗೊಂಡ ಸಾರಲೇಖವನ್ನು ಅರ್ಜಿಯೊಂದಿಗೆ ಲಗತ್ತಿಸಿರಬೇಕು.

ಅರ್ಹ ಸಂಶೋಧನಾರ್ಥಿಗಳನ್ನು ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು. ಸಂದರ್ಶನಕ್ಕೆ ಅವರ ಸ್ವಂತ ಖರ್ಚಿನಿಂದ ಬಂದು ಹೋಗಬೇಕಾಗುತ್ತದೆ. 2015 ರ ಮೇ 30 ರ ಒಳಗೆ ಅರ್ಜಿ ಸಲ್ಲಿಸಲು ನಿಗಧಿಪಡಿಸಲಾಗಿದ್ದ ದಿನಾಂಕವನ್ನು ಜೂನ್ 15 ರವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕೇಂದ್ರ ವೆಬ್‌ಸೈಟ್ www.saintpoetkanaka.in ನ್ನು ನೋಡಬಹುದು ಅಥವಾ ದೂರವಾಣಿ ಸಂಖ್ಯೆ 080 – 22113147 ರ ಮೂಲಕ ಸಂಪರ್ಕಿಸಬಹುದಾಗಿದೆ.

ಪಹೊ:ಬಾಬು:ಜಿಪಿಆರ್.

## ಯಶಸ್ವಿನಿ ಯೋಜನೆ: ನೋಂದಣಿಗೆ ಅವಧಿ ವಿಸ್ತರಣೆ

**ಬೆಂಗಳೂರು, ಜೂನ್ 5 (ಕರ್ನಾಟಕ ವಾರ್ತೆ)**

ರಾಜ್ಯದ ಪ್ರತಿಷ್ಠಿತ ಯಶಸ್ವಿನಿ ಸಹಕಾರ ರೈತರ ಮತ್ತು ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಯ ನೋಂದಾವಣೆ ಮೇ 31 ಕ್ಕೆ ಮುಕ್ತಾಯವಾಗಿದ್ದು, ಕರ್ನಾಟಕ ಸರ್ಕಾರವು, ಗ್ರಾಮೀಣ ಮತ್ತು ನಗರ ಸಹಕಾರಿಗಳು ಮತ್ತು ಅವರ ಕುಟುಂಬ ವರ್ಗದವರು ಹೆಚ್ಚಿನ ಸಂಖ್ಯೆಯಲ್ಲಿ ನೋಂದಾಯಿಸಿಕೊಳ್ಳಲು ಅನುಕೂಲವಾಗುವಂತೆ ನೋಂದಾವಣೆ ಅಂತಿಮ ದಿನಾಂಕವನ್ನು ಜೂನ್ 30 ರ ರವರೆಗೆ ವಿಸ್ತರಿಸಿದೆ.

ಬಾಬು/ಕೆಎಂ

## ಆಕ್ಷೇಪಣೆ

**ಬೆಂಗಳೂರು, ಜೂನ್ 5 (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಸೇವಾ ಆಯೋಗವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿನ ತಮಿಳು ಉಪನ್ಯಾಸಕರ 04 ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಮತೆ ಜೂನ್ 3 ರಂದು ರಂದು ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಆಯೋಗದ ಅಂತರ್ಜಾಲ:http://kpsc.kar.nic.in ರಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಗಳು ಆಯ್ಕೆಪಟ್ಟಿ ಪ್ರಕಟಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು –560 001 ಇವರಿಗೆ ಸಲ್ಲಿಸಬಹುದೆಂದು ಆಯೋಗದ ಪ್ರಕಟಣೆ ತಿಳಿಸಿದೆ.

ಬಾಬು/ಕೆಎಂ